INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -6, November-December, 2025
Page No,16-27
Peer -Reviewed, Refereed Journal

# ಬುದ್ಧ ಆತನ ಧಮ್ಮ ಮತ್ತು ಮಹಿಳೆ

* ದೀಪಸರಸ್ವತಿ.[1]

**ಪೀಠಿಕೆ:**

ವೇದಗಳ ಕಾಲದ ಭಾರತದಲ್ಲಿ ಮಹಿಳೆಯರ ಸ್ಥಿತಿ ತುಂಬ ಚಿಂತಾಜನಕವಾಗಿತ್ತು. ಮಹಿಳೆಯರ ಮೇಲೆ ಹಲವು ರೀತಿಯಾದ ದೌರ್ಜನ್ಯ ಮತ್ತು ದಬ್ಬಾಳಿಕೆ ಮಾಡುವುದರ ಜೊತೆಗೆ ಪ್ರಾಣಿಗಳ ರೀತಿಯಲ್ಲಿ ಮಹಿಳೆಯರ ಜೊತೆ ನಡೆದುಕೊಳ್ಳುತಿದ್ದರು ಮತ್ತು ಮಹಿಳೆಯರನ್ನು ನಡೆಸಿಕೊಳ್ಳುತ್ತಿದ್ದರು.

ಮಹಿಳೆಯರಿಗೆ ಯಾವುದೇ ರೀತಿಯಾದ ಸ್ವಾತಂತ್ರ, ಸಮಾನತೆ, ಹಕ್ಕುಗಳನ್ನು ನೀಡದೆ ಎಲ್ಲಾ ರಂಗದಲ್ಲಿಯೂ ನಿರ್ಬಂಧವನ್ನು ಹೇರಿ ನಾಲ್ಕು ಗೋಡೆಗಳಿಗೆ ಸೀಮಿತ ಮಾಡಿದ್ದರು. ಇದರ ಜೊತೆಗೆ, ಶಿಕ್ಷಣ, ಅಧಿಕಾರ, ಹಕ್ಕು, ಪೂಜೆ, ಹೋಮ, ಅಧಿಕಾರದಿಂದ ಮಹಿಳೆಯರಿಗೆ ನಿರ್ಬಂಧ ಹಾಕಿದ್ದರು. ಈ ಸ್ಥಿತಿಯಲ್ಲಿ ಮಹಿಳೆಯರು ಹಲವು ಕಷ್ಟ–ನೋವು ಅನುಭವಿಸುತ್ತಿದ್ದರು. ಈ ಸಂದರ್ಭದಲ್ಲಿ ಜಗಕ್ಕೆಲ್ಲ ಬೆಳಕು ಚೆಲ್ಲುವ ಮೂಲಕವಾಗಿ ಭಗವಾನ್ ಬುದ್ಧರು ಜ್ಞಾನವನ್ನು ಪಡೆದು ಹಿಂದಿರುಗಿ ಬುದ್ಧರಾಗಿ ಬಂದರು. ಈ ಸಂದರ್ಭದಲ್ಲಿ ಅವರ ಶಿಷ್ಯರಾದ ಆನಂದರಿಂದ ಪ್ರೇರಣೆ ಪಡೆದ ಬುದ್ಧರು ತಮ್ಮ ಸಂಘದಲ್ಲಿ ಮಹಿಳೆಯರಿಗೆ ಪ್ರಧಾನ್ಯತೆ ನೀಡುವುದಕ್ಕೆ ಪ್ರಾರಂಭಿಸಿದ್ದರು. ಇಲ್ಲಿ ಮಹಿಳೆಯರು ಪುರುಷರಂತೆ ಸಮಾನವಾದ ಸ್ವತಂತ್ರ, ಸಮಾನತೆ, ಹಕ್ಕುಗಳನ್ನು ಪಡೆಯುವುದಕ್ಕೆ ಪ್ರಾರಂಭಿಸಿದ್ದರು. ಹಾಗೆ ಮಹಿಳೆಯರಿಗೆ ಬೌದ್ಧ ಧಮ್ಮದಲ್ಲಿ ಗೌರವ, ಘನತೆಯ ಜೀವನ ಲಭಿಸುವುದಕ್ಕೆ ಪ್ರಾರಂಭವಾಯಿತು. ಹೀಗೆ ಬುದ್ಧನ ಸಮಾಜದಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯ, ಸಮಾನತೆ ದೊರೆಯುವುದರ ಜೊತೆಗೆ ದೇಶದ ಎಷ್ಟು ಮಹಿಳೆಯರು ಬೌದ್ಧ ಧಮ್ಮದಲ್ಲಿ ಸನ್ಯಾಸತ್ವವನ್ನು ಸ್ವೀಕರ ಮಾಡಿ ಭೀಕುಣಿಯರಾದರು.

ಎಷ್ಟು ಮಹಿಳೆಯರು ಬೌದ್ಧ ಧಮ್ಮವನ್ನು ದೇಶ–ವಿದೇಶದಲ್ಲಿ ಹರಡುವುದಕ್ಕೆ ಬುದ್ಧರಿಂದ ಪ್ರೇರಣೆ ಪಡೆದು ಹೋರಟರು. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಅಶೋಕ ಚಕ್ರವರ್ತಿಯ ಕಾಲದಲ್ಲಿ

[1] ಸಂಶೋಧನಾ ವಿದ್ಯಾರ್ಥಿ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗು ವಿಸ್ತರಣ ಕೇಂದ್ರ,ಮಾನಸ ಗಂಗೋತ್ರಿ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

ಅಶೋಕನ ಮಕ್ಕಳಾದ ಸಂಘಮಿತ್ರೆ ಕೂಡ ನಮ್ಮ ದೇಶದ ಪಕ್ಕದಲ್ಲಿ ಇರುವ ಶ್ರೀಲಂಕ ದೇಶಕ್ಕೆ ಬೌದ್ಧ ಧಮ್ಮ ಪ್ರಚಾರಕ್ಕಾಗಿ ಹೋಗಿರುವುದನ್ನು ಕಾಣಬಹುದಾಗಿದೆ. ಬುದ್ಧರ ಕಾಲದಲ್ಲಿ ಎಷ್ಟು ಜನ ರಾಜ–ಮಹಾರಜರಿಂದ ಹಿಡಿದು ಸಾಮಾನ್ಯ ಪ್ರಜೆಗಳು ಕೂಡ ತಮಗೆ ಜನಿಸಿದ ಮಕ್ಕಳಲ್ಲಿ ಒಂದು ಮಗು ಅಂದರೆ ಹಿರಿಯ ಮಗಳು ಅಥವಾ ಮಗನನ್ನು ಪ್ರೀತಿಯಿಂದ ಉದ್ದೇಶ ಪೂರಕವಾಗಿ ಮಗುವನ್ನು ಭಂತೆ ಮತ್ತು ಪೂಜ್ಯ ಭಿಕ್ಷುಣಿಯರಾಗಿ ಮಾಡುತ್ತಿದ್ದರು.

ಕೋಸಲ ರಾಜ ಪಸಾಂದಿ ಮತ್ತು ಕೋಸಲ ಬುದಿಷ್ಟ ಮಹಾರಾಣಿ ಮಲೀಕ ಈ ದಂಪತಿಗಳಿಗೆ ಹೆಣ್ಣು ಮಗು ಹುಟ್ಟುತ್ತಾಳೆ. ಇದನ್ನು ನೋಡಿದ ಕೋಸಲ ರಾಜ ತುಂಬ ದುಃಖ ಪಡುತ್ತಾನೆ. ಹೆಣ್ಣು ಮಗು ಹುಟ್ಟಿದೆ ಎಂದು ಆಗ ಭಗವನ್ ಬುದ್ಧರು ಈ ರೀತಿಯಾಗಿ ಹೇಳುತ್ತಾರೆ. ರಾಜನಿಗೆ "A girl may prove even a better off spring." ಈ ಒಂದು ವಾಕ್ಯದಿಂದ ತಿಳಿಯುವುದು ಏನೆಂದರೆ ಮಕ್ಕಳ ಮತ್ತು ಮಹಿಳೆಯರ ಮೇಲೆ ಬುದ್ಧರು ಗೌರವ, ಮಮತೆ, ಪ್ರೀತಿ ಮತ್ತು ಪೂಜ್ಯ ಭಾವನೆ ಇತ್ತು ಎಂಬುದು.

ಒಂದು ನಾಗರಿಕತೆಯ ಹೀನ ಮತ್ತು ಉಚ್ಚಾಯ ಸ್ಥಿತಿಗಳೆರಡೂ ಆ ನಾಗರಿಕತೆಯಲ್ಲಿ ಸ್ತ್ರೀ ಹೊಂದಿರುವ ಸ್ಥಾನಮಾನದ ಮೇಲೆ ಅವಲಂಬಿತವಿರುತ್ತದೆ. ಯಾವ ನಾಗರಿಕತೆಯಲ್ಲಿ ಸ್ತ್ರೀಯನ್ನು ಗುಲಾಮಳನ್ನಾಗಿ ಅವಳ ಹಕ್ಕುಗಳನ್ನು ದಮನಗೊಳಿಸಲಾಗುವುದೋ ಅಂಥ ನಾಗರಿಕತೆ ನಾಗರಿಕತೆಯೆನಿಸಲಾರದು. ಪ್ರಾಚೀನ ಭಾರತದಲ್ಲಿ ಸ್ತ್ರೀಯನ್ನು ಗೌರವದಿಂದ ಕಾಣಲಾಗುತ್ತಿತ್ತು. ಮತ್ತು ಅವಳು ಪುರುಷನಷ್ಟೇ ಸಮಾನತೆ ನಾಗರಿಕ ಹಕ್ಕುಗಳನ್ನು ಹೊಂದಿದ್ದಳು. ಎಂಬುದನ್ನು ಇತಿಹಾಸ ಹೇಳುತ್ತದೆ. ಹಾಗೆ ಇದಕ್ಕೆ ಪೂರಕವಾಗುವಂತೆ ಸಾಂಪ್ರದಾಯಿಕ ಹಿಂದೂ ಬರಹಗಾರರು ವೇದಗಳ ಕಾಲದಲ್ಲಿ ಸ್ತ್ರೀಯನ್ನು ಗೌರವದಿಂದ ಕಾಣಲಾಗುತ್ತಿತ್ತು. ಮತ್ತು ಸ್ತ್ರೀಯರು ಸ್ವತಂತ್ರವಾಗಿದ್ದರು. ಎಂದು ಅಭಿಪ್ರಾಯ ಪಡುತ್ತರೆ. ಆದರೆ ಆ ಕಾಲದಲ್ಲಿ ಸ್ತ್ರೀಯನ್ನು ದಾನರೂಪವಾಗಿ ಕೊಡುವ ಮತ್ತು ಲೈಂಗಿಕವಾಗಿ ಶೋಷಣೆ ಮಾಡುವ ಸ್ಥಿತಿ ವೇದಕಾಲದಲ್ಲಿತ್ತು. ಸ್ತ್ರೀ ಪುರುಷನ ಆಸ್ತಿ ಅಷ್ಟೇ ಆಗಿದ್ದಾಳೆಂಬುದನ್ನು ನೋಡಬಹುದು. ಹೀಗೆ ಸ್ತ್ರೀಯನ್ನು ಪಶುಗಳಂತೆ ದಾನಮಾಡಲಾಗುತ್ತಿತ್ತು. ದಾನವಾಗುವ ವಸ್ತುವಿಗೆ ಯಾವುದೇ ವ್ಯಕ್ತಿತ್ವ ಇರುತ್ತಿರಲಿಲ್ಲ. ಹಕ್ಕು ಮತ್ತು ಸ್ವಾತಂತ್ರ ಕೂಡ ಇರುವುದಿಲ್ಲ. ಇವರ ಮೇಲಿನ ಸಂಪೂರ್ಣ ಅಧಿಕಾರ ದಾನ ಕೊಡುವ ಮತ್ತು ದಾನ ಪಡೆಯುವವರಿಗೆ ಮಾತ್ರ ಇರುತ್ತಿತ್ತು.

ಋಗ್ವೇದದ 10ನೇ ಮಂಡಲದಲ್ಲಿ "ದೇವಾತ್ಮನಾದ ಭಗವಾನನೂ (ಆರ್ಯಮನ್‌ನೂ ಸಪಿತೃವೂ) ಪೋಷದೇವನೂ ನಾನು ಗೃಹಸ್ಥನಾಗಲು ನಿನ್ನನ್ನು ನನಗೆ ದಾನ ಮಾಡಿದರು" ಎಂದು ಹೇಳಲಾಗಿದೆ. ಒಬ್ಬರಿಗಿಂತ ಹೆಚ್ಚು ಜನ ಒಂದೇ ವಸ್ತುವನ್ನು ದಾನ ಮಾಡಿದ್ದರೆಂದರೆ ಅದರ ಅರ್ಥ ಆ ವಸ್ತುವಿನ ಮೇಲೆ ಅವರೆಲ್ಲ ಸಮಾನ ಹಕ್ಕು ಹೊಂದಿದ್ದರೆಂಬುದು. ವೇದ ಕಾಲದಲ್ಲಿ ಆರ್ಯರು ಉಳಿದ ಮೂರು ವರ್ಗಗಳ ಮೇಲೆ ತಮ್ಮ ಹತೋಟಿ ಸ್ಥಾಪಿಸಿ ಆ ವರ್ಗದ ಹೆಣ್ಣು ಮಕ್ಕಳನ್ನು ಲೈಂಗಿಕವಾಗಿ ಶೋಷಣೆ ಮಾಡಿದ್ದು ಕಂಡುಬರುತ್ತದೆ.

ಆರ್ಯರ ಯಜ್ಞ ಪದ್ಧತಿಯಲ್ಲಿ ಕೂಡ ಸ್ತ್ರೀ ಶೋಷಣೆ ಕಂಡುಬರುತ್ತದೆ. ಯಜ್ಞ ಮಾಡುವ ಯಜಮಾನ 'ಬ್ರಹ್ಮಚಾರ್ಯವೃತ ಪಾಲಿಸುತ್ತಾನೆ ಮತ್ತು ಯಜ್ಞಕ್ಕೆ ಬರುವ ಅತಿಥಿಗಳಿಗೆ ತನ್ನ ಹೆಂಡತಿಯನ್ನು ಅವರಿಗೆ ಕೊಡುತ್ತಿದ್ದುದಲ್ಲದೇ ಅವರಿಂದ ಸಂತಾನವನ್ನು ಪಡೆಯುತ್ತಿದ್ದನೆಂದು ಹೇಳಲಾಗಿದೆ. ಹೀಗೆ ಮನೆಯಿಂದ ಹೊರಗೆ ಅಂದರೆ ಯಜ್ಞ ಮಂಟಪದಲ್ಲಿ ಹುಟ್ಟಿದವರಿಗೆ "ಆಯೋನಿಜ ಎಂದು ಕರೆಯುತ್ತಿದ್ದರು. ಯಜ್ಞ ಮಂಟಪದಲ್ಲಿ ನಡೆಯುವ ಲೈಂಗಿಕ ಕ್ರಿಯೆ ಯಜ್ಞಕ್ಕೆ ಬಂದವರ ಸಮ್ಮುಖದಲ್ಲಿ ಬಹಿರಂಗವಾಗಿ ನಡೆಯುತ್ತಿತ್ತು. ಈ ಪದ್ಧತಿ ಮುಂದಿನ ಹಂತದಲ್ಲಿ ಹೆಂಡತಿಯನ್ನು ಬೇರೆಯವರಿಗೆ ಬಾಡಿಗೆ ಕೊಡುವವರೆಗೆ ಹೋದದ್ದನ್ನು ತಳ್ಳಿಹಾಕಲಾಗುವುದಿಲ್ಲ. ಮರಾಠಿಯ, ಬಾಡ್ಯಾ ಎನ್ನುವ ಬೈಗುಳದ ಮೂಲ ಉತ್ಪತ್ತಿ ಇದರಿಂದಲೇ ಆಗಿದೆ. ಅಂದರೆ ಯಾವನು ತನ್ನ ಹೆಂಡತಿಯನ್ನು ಬಾಡಿಗೆ ಕೊಡುತ್ತಿದ್ದನೋ ಅವರನ್ನು 'ಬಾಡ್ಯಾ' ಎನ್ನುತ್ತಿದ್ದರು. ಬಾಡ್ಯಾ ಮೂಲತಃ ಸಂಸ್ಕೃತ ಪದಬರಿಕದಿಂದ ಬಂದಿದೆ. ವೇದಗಳಲ್ಲಿ ಯಜ್ಞ ಮಂಟಪಗಳಲ್ಲಿ ಇಲ್ಲದ ಅನಾಚಾರಗಳೆಲ್ಲ ನಡೆಯುತ್ತಿದ್ದವು. ಯಜ್ಞ ಮಾಡಬೇಕಾದ ಪುರೋಹಿತರು ರಾಜನ ಸ್ತ್ರೀಯರನ್ನೆಲ್ಲ ಲೈಂಗಿಕವಾಗಿ ಶೋಷಣೆ ಮಾಡುತ್ತಿದ್ದರು. ಹಾಗೆ ವೇದಗಳ ಕಾಲದಲ್ಲಿ ಸ್ತ್ರೀಯರಿಗೆ ವಿದ್ಯೆಯನ್ನು ನೀಡಬಾರದು. ಏಕೆಂದರೆ ಅವರು ದಡ್ಡರಿರುತ್ತಾರೆ ಎಂದು ಋಗ್ವೇದದ 10ನೇ ಸೂಕ್ತದಲ್ಲಿ ಹೇಳಲಾಗಿದೆ. ಹೆಂಗಸರು ತಮ್ಮ ಗಂಡ ಸತ್ತಾಗ ಚಿತೆಯ ಮೇಲೆ ಬಿದ್ದು ತಾವೂ ಸುಟ್ಟುಕೊಂಡು ಸಾಯಬೇಕು.ಎಂದು ವೇದ ಹೇಳುತ್ತದೆ. ಹಾಗೆ ಸ್ತ್ರೀಯರು ಅಸಹಾಯಕರು ಆದ್ದರಿಂದ ಆಸ್ತಿಯಲ್ಲಿ ಅವರಿಗೆ ಹಕ್ಕು ಇರುವುದಿಲ್ಲ ಎಂದು ಯಜುರ್ವೇಧ ಹೇಳುತ್ತದೆ. ಸ್ತ್ರೀಯರು ಎಂದೂ ಒಳ್ಳೆಯ ಸಂಗಾತಿಗಳಾಗಲಾರರು. ಅವರಿಗೆ ಕತ್ತೆ, ಕಿರುಬದಂಥ ಕಠೋರ ಹೃದಯವಿರುತ್ತದೆ ಎಂದು ಋಗ್ವೇದ ಹೇಳುತ್ತದೆ.

ಮೇಲಿನ ಈ ಹೇಳಿಕೆಗಳನ್ನು ನೋಡಿದರೆ ಸ್ತ್ರೀಯರ ಸ್ಥಿತಿ ವೇದಗಳ ಕಾಲದಲ್ಲಿ ಮನುವಿನ ಕಾಲಕ್ಕಿಂತಲೂ ಭಿನ್ನವೇನೂ ಇರಲಿಲ್ಲ ಎಂದು ಮೇಲ್ನೋಟಕ್ಕೆ ಸಾಬೀತಾಗುತ್ತದೆ.

ಹೆಣ್ಣು ಮಕ್ಕಳಿಗೆ ಇಷ್ಟೆಲ್ಲ ನಿರ್ಬಂಧ ಹೇರಿದ ವೇದಗಳ ಕಾಲದ ಕಾನೂನು ಅದೇ ಗಂಡು/ಪುರುಷ ಹೆಂಡತಿ ಸತ್ತ ಕೂಡಲೇ ಮತ್ತೊಂದು ಮದುವೆಗೆ ಸಿದ್ಧನಾಗುತ್ತಿದ್ದ. ಪುರುಷನಿಗೆ ಯಾವುದೇ ಕಟ್ಟುಪಾಡುಗಳನ್ನು ಹೇರಲಿಲ್ಲ. ವೇದಕಾಲವು ಪುರುಷರಿಗಾಗಿಯೇ ಇತ್ತು. ಸ್ತ್ರೀಯರ ವಿಮೋಚನೆಗೆ ಸಂಬಂಧಿಸಿದಂತೆ ಶ್ರಮಿಸಿದ್ದವರಲ್ಲಿ ಗೌತಮ ಬುದ್ಧರೇ ಪ್ರಪ್ರಥಮ ವಿಮೋಚಕರೆಂದು ಹೇಳಬಹುದಾಗಿದೆ. ಈ ಎಲ್ಲಾ ಅನಾಚಾರಗಳ ವಿರುದ್ಧ ಅಂದರೆ ವೈದಿಕ ಧರ್ಮದ ವಿರುದ್ಧ ಬಂಡೆದ್ದು ಸ್ವಾತಂತ್ರ, ಸಮಾನತೆ ಮತ್ತು ಸಹೋದರತೆ ತತ್ವಗಳ ಮೇಲೆ ಅಹಿಂಸಾತ್ಮಕವಾದ ಮಾನವೀಯ ಧರ್ಮ ಸ್ಥಾಪಿಸಿದ್ದರು. ಹೀಗಾಗಿ ಬುದ್ದನ ಧಮ್ಮ ಜನಪ್ರಿಯಗೊಂಡು ಅತ್ಯಂತ ಉಚ್ಛ್ರಾಯ ಸ್ಥಿತಿಗೇರಿದಾಗ ಮಹಿಳೆಯರ ಸ್ಥಾನಮಾನ ವೈದಿಕ ಧರ್ಮದಲ್ಲಿದ್ದುದಕ್ಕಿಂತ ಭಿನ್ನವಾಗಿತ್ತು.

ವೈದಿಕ ಕಾಲದಲ್ಲಿ ಕನ್ಯೆಯರನ್ನು ನೋಡುವ ದೃಷ್ಟಿಕೋನಕ್ಕೂ ಮತ್ತು ಬುದ್ಧರ ಕಾಲದಲ್ಲಿನ ದೃಷ್ಟಿಕೋನಕ್ಕೂ ಅಜಗಜಾಂತರ ಅಂತರವಿತ್ತು.

ವೈದಿಕ ಕಾಲದಲ್ಲಿ ಪುತ್ರಿಯನ್ನು ಹೀನದೃಷ್ಟಿಯಿಂದ ನೋಡಲಾಗುತ್ತಿತ್ತು. ಆದರೆ ಬುದ್ಧರ ಕಾಲದಲ್ಲಿ ಆ ರೀತಿಯಾದಂತಹ ದೃಷ್ಟಿಕೋನವಿರಲಿಲ್ಲ. ವೈದಿಕ ಕಾಲದಲ್ಲಿ ಪುತ್ರ ಮತ್ತು ಪುತ್ರಿಯರ ನಡುವೆ ಅಸಮಾನತೆ ಇತ್ತು. ಅದೇ ಬುದ್ಧರ ಕಾಲದಲ್ಲಿ ಪುತ್ರ ಮತ್ತು ಪುತ್ರಿಯರ ನಡುವೆ ಯಾವುದೇ ಬೇಧ–ಭಾವವಿರಲಿಲ್ಲ. ಬುದ್ಧರ ಕಾಲದಲ್ಲಿ ಅವಿವಾಹಿತ ಸ್ತ್ರೀಯರಿಗೆ ಕೊಡುವ ಸ್ಥಾನಮಾನವು ಹೆಚ್ಚಿನದಾಗಿದ್ದವು.

ವೈದಿಕಕಾಲದಲ್ಲಿ ಸಂತಾನಹೀನ ಮಹಿಳೆಯನ್ನು ಮನೆಯಿಂದ ಹೊರದೂಡಲಾಗುತ್ತಿತ್ತು. ಅಲ್ಲದೆ ಅವಳ ಪತಿಗೆ ಪುನರ್ವಿವಾಹ ಮಾಡಲಾಗುತ್ತಿತ್ತು. ಅಷ್ಟೆ ಅಲ್ಲದೆ ಪುತ್ರ ಜನಿಸದಿದ್ದರೆ ಅವಳಿಗೆ ಯಾವುದೇ ಬೆಲೆ ಇರುತ್ತಿರಲಿಲ್ಲ. ಅದರಂತೆ ಸ್ತ್ರೀಯರ ಪುನರ್ವಿವಾಹಕ್ಕೆ ಅವಕಾಶವಿರಲಿಲ್ಲ. ಆದರೆ ಬೌದ್ಧ ಧಮ್ಮದಲ್ಲಿ ಈ ಒಂದು ಅನಾಚಾರ ಇರಲಿಲ್ಲ. ಒಂದು ವೇಳೆ ದಂಪತಿಗಳಿಗೆ ಮಕ್ಕಳಿಲ್ಲದಿದ್ದರೆ ದತ್ತು ತೆಗೆದುಕೊಳ್ಳುತ್ತಿದ್ದರು. ಅನಾಥ ಮಕ್ಕಳಿಗೆ ಪ್ರೀತಿ ಹಾಗೂ ವಾತ್ಸಲ್ಯ ತೋರಿಸುವುದಾಗಿತ್ತು.

ಉದಾ: ಸಾಮವತಿ ಎಂಬ ಕನ್ನೆಯು ಪ್ರೌಢಳಾಗುತ್ತಿದ್ದಂತೆ ತಂದೆ–ತಾಯಿ ಹಾಗೂ ಕುಟುಂಬದ ಸದಸ್ಯರನ್ನು ಕಳೆದುಕೊಂಡಳು. ಆಗ ಮಿತ್ತಾ ಎಂಬ ಹೆಸರಿನ ಉಪಾಸಕನು ಅವಳನ್ನು ದತ್ತು ತೆಗೆದುಕೊಂಡನು. ಪುತ್ರಿಯನ್ನು ದತ್ತ ಪಡೆಯುವುದು ಪಾಪವಲ್ಲವೆಂದು ಬುದ್ಧನ ಕಾಲದಲ್ಲಿ ಹೇಳಲಾಗಿದೆ.

ವೈದಿಕ ಧರ್ಮದ ಪ್ರಕಾರ ಜನಿಸಿದ ಪ್ರತಿಯೊಬ್ಬ ಕನ್ಯೆಯು ವಿವಾಹವಾಗಲೇಬೇಕು. ಅವಿವಾಹಿತ ಕನ್ಯೆಯನ್ನು ಪಾಪಿ ಎಂದು ತಿಳಿಯಲಾಗುತ್ತಿತ್ತು. ಇವರಿಗೆ ಸಮಾಜದಲ್ಲಿ ಮರ್ಯಾದೆ ಇರಲಿಲ್ಲ. ಆದರೆ ಬುದ್ಧನ ಕಾಲದಲ್ಲಿ ಅವಿವಾಹಿತರಾಗಿರುವುದು ಪಾಪವೆಂದು ಭಾವಿಸಿರಲಿಲ್ಲ. ಮರ್ಯಾದೆ, ಗೌರವಕ್ಕೆ

ಯಾವುದೇ ರೀತಿಯ ಧಕ್ಕೆ ಇರಲಿಲ್ಲ. ಇವರು ತಾಯಿ, ಸಹೋದರ, ಸಹೋದರಿ ಹಾಗೂ ಕುಟುಂಬದ ಇತರ ಸದಸ್ಯರ ಸೇವೆಯನ್ನು ಮಾಡುತ್ತಾ ಕಾಲ ಕಳೆಯುತ್ತಿದ್ದರು.

ಉದಾ: ಸುವರ್ಣಕಾರ ಕನ್ಯೆ ಶೋಭಾ ಎಂಬುವವಳು ಸಕಲ ಸಂಪತ್ತನ್ನು ಹೊಂದಿದ್ದಳು. ಇವಳ ಸೇವೆಗೆ ಸೇವಕರೂ ಇದ್ದು ಇವಳು ಎಲ್ಲಾ ಸಂಪತ್ತಿನ ಜವಾಬ್ದಾರಿಯನ್ನು ಸ್ವತಃ ನಿರ್ವಹಿಸಿದ್ದು ಅವಿವಾಹಿತಳಾಗೇ ಉಳಿದಿದ್ದಳು. ಬುದ್ಧರ ಕಾಲದಲ್ಲಿ ಬಾಲ್ಯವಿವಾಹ ಪದ್ಧತಿಯು ರೂಢಿ ಯಲ್ಲಿರಲಿಲ್ಲ. ಮ್ಯಾಕ್ ಡೋನಾಲ್ಡ್ ಮತ್ತು ಆತ್ ಅವರ ಪ್ರಕಾರ ಯಾವಾಗ ಮನುಸ್ಮೃತಿ ಮತ್ತು ಉಳಿದ ಧರ್ಮಸೂತ್ರಗಳು ರಚನೆಗೊಂಡವೋ ಆಗಿನಿಂದ ಬಾಲ್ಯವಿವಾಹ ಪದ್ಧತಿಯು ಜಾರಿಯಾಯಿತು ಎಂದು ಹೇಳಿದ್ದಾರೆ.

ಬುದ್ಧರ ಕಾಲದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯ ದೊರೆಯುತ್ತ ಹೋದಂತೆ ಅವರಿಗೆ ತಮ್ಮ ಬಾಳ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವೂ ದೊರೆಯಿತು. ಅನೇಕ ವಿದ್ವಾಂಸರ ಪ್ರಕಾರ ಸ್ತ್ರೀ ಸ್ವಾತಂತ್ರ್ಯವು ಬುದ್ಧರ ಕಾಲದಿಂದಲೇ ರೂಢಿಗೆ ಬಂದಿತ್ತು. ಅದಕ್ಕಾಗಿ ಸ್ವಯಂವರವನ್ನೇ ಏರ್ಪಡಿಸುತ್ತಿದ್ದರು ಎಂದು ಅನೇಕ ಪಂಡಿತರು ಅಭಿಪ್ರಾಯ ಪಟ್ಟಿದ್ದಾರೆ.

ಬುದ್ಧರ ಕಾಲದಲ್ಲಿ ವಿವಾಹದ ಸಂದರ್ಭದಲ್ಲಿ ಕುಂಡಲಿಯನ್ನು ನೋಡುವುದಾಗಲೀ ಜೋತಿಷ್ಯವನ್ನು ಕೇಳುವುದಾಗಲೀ, ಶುಭ-ಅಶುಭ ದಿನ ನೋಡುವ ಭ್ರಮೆ ಇರಲಿಲ್ಲ. "ಬುದ್ಧರು ಈ ಆಕಾಶದ ತಾರೆಗಳು ನಮ್ಮ ಭವಿಷ್ಯವನ್ನು ಹೇಳುತ್ತವೆಯೇ ಎಂದು ಪ್ರಶ್ನಿಸುತ್ತಿದ್ದರು."

ಬುದ್ಧರ ಕಾಲದಲ್ಲಿ ವಿವಾಹದ ಸಮಯದಲ್ಲಿ ವರದಕ್ಷಿಣೆಯ ಪ್ರಸ್ತಾವನೆ ಹಾಗೂ ಉಪದೇಶ ಮಾಡುತ್ತಿದ್ದ ಬ್ರಾಹ್ಮಣನಿಗೆ ಹೀನಜೀವನ ಸಾಗಿಸುವ ಮತ್ತು ನೀಚಕೃತ್ಯ ಮಾಡುವವನೆಂದು ಭಾವಿಸಲಾಗುತ್ತಿತ್ತು. ಬುದ್ಧರ ಕಾಲದಲ್ಲಿ ವಿವಾಹದ ಸಮಯದಲ್ಲಿ ಸ್ತ್ರೀಯರಿಗೆ ಉಡುಗೊರೆ ಹಾಗೂ ಸಂಪತ್ತು ಕೊಡುವ ಪದ್ಧತಿ ಇದ್ದು ಆ ಸಂಪತ್ತು ಸ್ತ್ರೀಯರಿಗೆ ಸೇರುತ್ತಿತ್ತು. ಇದರ ಮೇಲೆ ಅವರಿಗೆ ಅಧಿಕಾರವಿತ್ತು. ಧನಕರು, ನಗನಾಣ್ಯವಲ್ಲದೆ ಚಿನ್ನ, ಬೆಳ್ಳಿ, ಹಿತ್ತಾಳೆಯ ಪಾತ್ರೆಗಳು,ತುಪ್ಪ, ಅಕ್ಕಿ, ಹೊದಲ ಉತ್ಪನ್ನಗಳು, ಆಕಳು, ಎತ್ತುಗಳು, ಪ್ರಾಣಿಗಳನ್ನು ಕೊಡುತ್ತಿದ್ದರು.

ಉದಾ: ಕೋಸಲಾಧಿಪತಿ ತನ್ನ ಪುತ್ರಿಯನ್ನು ಬಿಂಬಸಾರನಿಗೆ ಮದುವೆ ಮಾಡಿಕೊಡುವಾಗ ಕಾಶಿ ರಾಜ್ಯದ ಒಂದು ಊರನ್ನು ಉಡುಗೊರೆಯಾಗಿ ತನ್ನ ಪುತ್ರಿಗೆ ನೀಡಿದ. ಎಂಬುದು ತಿಳಿದುಬಂದಿದೆ.

ಬುದ್ಧರ ಕಾಲದ ಸಮಾಜದಲ್ಲಿ ವೈಚಾರಿಕ ಕ್ರಾಂತಿ ಉಂಟಾಯಿತು. ಸ್ತ್ರೀಯರಿಗೆ ಸಾಮಾಜಿಕವಾಗಿ, ಧಾರ್ಮಿಕವಾಗಿ, ಸನ್ಮಾನ ದೊರಕಿತು. ಕುಟುಂಬದಲ್ಲಿಯೂ ಅವಳ ಮರ್ಯಾದೆ ಹೆಚ್ಚಿಯಿತ್ತು. ಇದರಿಂದಾಗಿ ಅವರಿಗೆ ಸಾಮಾಜಿಕ ಪ್ರತಿಷ್ಠೆ ದೊರೆಯಿತು. ಬುದ್ಧರ ಕಾಲದಲ್ಲಿ ಸ್ತ್ರೀ ಚಳುವಳಿಗೆಳು ಸಾವಕಾಶವಾಗಿ ವಿಕಾಸವಾಗುತ್ತ ಬಂದವು. ಈ ಚಳುವಳಿಗಳ ಮುಖ್ಯ ಆಧಾರ ಸ್ತಂಭ ಭಗವನ್ ಬುದ್ಧರೆ ಆಗಿದ್ದರೂ ಕೂಡ ಅದರ ನೇತೃತ್ವವನ್ನು ಮಹಿಳೆಯರೇ ವಹಿಸಿದ್ದರು. ಸ್ತ್ರೀಯರು ತಮ್ಮ ಸ್ವಬುದ್ಧಿವಂತಿಕೆಯಿಂದ, ಚತುರತೆಯಿಂದ, ಆತ್ಮವಿಶ್ವಾಸದಿಂದ, ಸ್ವತಃ ತಾವೇ ಸ್ವಾತಂತ್ರ್ಯವನ್ನು ಮತ್ತು ಸಾಮಾಜಿಕ ಪ್ರತಿಷ್ಠೆಯನ್ನು ಗಳಿಸಿಕೊಂಡರು. ಹೀಗೆ ಸಮಾಜದಲ್ಲಿ ಉತ್ತಮ ಸ್ಥಾನಗಳಿಸುವುದರ ಮೂಲಕ ಮಾನಸಿಕ, ಶಾರೀರಕ ಗುಲಾಮಗಿರಿಯಿಂದ ಸ್ತ್ರೀ ಮುಕ್ತಳಾದಳು. ಸ್ತ್ರೀಯರ ಈ ಚಳವಳಿಯಲ್ಲಿ ಬೌದ್ಧ ಭಿಕ್ಷುಣಿಯರು ಮಹತ್ತರ ಪಾತ್ರವಹಿಸಿದ್ದರು.

ಪತ್ನಿಯರಿಗೆ ಮೊದಲಿದ್ದ ಕೆಳದರ್ಜೆಯ ಸ್ಥಾನಮಾನ ನಶಿಸಿ, ಅವಳನ್ನು ಪತಿಯ ಸಹಚರಣಿ ಹಾಗೂ ಮಾರ್ಗದರ್ಶಕಳೆಂದು ತಿಳಿಯಲಾಯಿತು. ವಿಧವೆಯನ್ನು ಅಶುಭ, ಹೀನಯಳು ಎಂದು ತಿಳಿಯಲಾಗುತ್ತಿದ್ದ ಕಾಲ ಹೋಗಿ ಅವಳಿಗೆ ಧಾರ್ಮಿಕ ಕಾರ್ಯಕಲಾಪಗಳಲ್ಲಿ ಭಾಗಿಯಾಗುವ ಅವಕಾಶ ದೊರೆಯಿತು. ಮನೆಯ ಸಮಸ್ತ ಸಂಪತ್ತನ್ನು ಸಂರಕ್ಷಿಸುವ ಅವಕಾಶ ಬುದ್ಧರ ಕಾಲದಲ್ಲಿ ಮಹಿಳೆಯರಿಗೆ ದೊರೆಯಿತು.

ಬುದ್ಧರ ಕಾಲದಲ್ಲಿ ಏಕಪತ್ನಿವೃತ ಜಾರಿಯಲ್ಲಿತ್ತು. ರಾಜರು, ಧನಶ್ರೇಷ್ಟಿಗಳು ಒಬ್ಬರಿಗಿಂತ ಹೆಚ್ಚು ಪತ್ನಿಯರನ್ನು ಸಲುಹುವ ಸಾಮರ್ಥ್ಯವಿರುವವರು ಮಾತ್ರ ಹೆಚ್ಚು ಪತ್ನಿಯರನ್ನು ವಿವಾಹವಾಗುತ್ತಿದ್ದರು. ಪಾಲಿ ಧರ್ಮಗ್ರಂಥದಲ್ಲಿ ಸಾಮಾನ್ಯವಾಗಿ ಏಕಪತ್ನಿತ್ವ ಪದ್ಧತಿ ಇರುವುದರ ಬಗ್ಗೆ ಉಲ್ಲೇಖವಿದೆ. ಒಬ್ಬ ಬ್ರಾಹ್ಮಣ ಉಚ್ಚ ಕುಲದಲ್ಲಿ ಜನಿಸಿದ ಸ್ತ್ರೀಯೇ ಸರ್ವಶ್ರೇಷ್ಠ ಗೃಹಿಣಿ ಎಂದು ಹೇಳಿದ್ದಾರೆ. ಬುದ್ಧರು ಸರ್ವೋತ್ಕೃಷ್ಟ ಸಂಸಾರ ಮಾಡುವ ಸ್ತ್ರೀಯೇ ಸರ್ವೋತ್ತಮ ಗೃಹಿಣಿ ಎಂದು ಹೇಳಿದರು.

ಬುದ್ಧರು ಪತಿ–ಪತ್ನಿಯರ ಸಂಬಂಧವು ಹೇಗಿರಬೇಕು ಎಂಬುದನ್ನು ತಿಳಿಸುವುದರ ಜೊತೆಗೆ ಪತಿಯು ಪತ್ನಿಯನ್ನು ಸನ್ಮಾನಿಸಬೇಕು ಗೌರವಿಸಬೇಕು. ಅವಳ ಜೊತೆ ವಿನಯದಿಂದ ವರ್ತಿಸಬೇಕು. ಅವಳ ವಿಶ್ವಾಸವನ್ನು ಗಳಿಸಬೇಕು. ಮನೆಯ ಕಾರ್ಯಕಲಾಪಗಳ ಜವಾಬ್ದಾರಿಯನ್ನು ವಹಿಸಬೇಕು. ಆಭರಣಗಳನ್ನು ಕೊಡಿಸಬೇಕು. ಇದಕ್ಕೆ ಬದಲಾಗಿ ಪತ್ನಿಯು ಪತಿಯ ಮೇಲೆ ಪ್ರೇಮದ ಮಳೆ ಸುರಿಸಬೇಕು. ಗೃಹಕೃತ್ಯಗಳನ್ನು ಜವಾಬ್ದಾರಿಯಿಂದ ಸಂಬಾಳಿಸಿಕೊಂಡು ಹೋಗಬೇಕು. ತನ್ನ ತಂದೆ–

ತಾಯಿ, ಅತ್ತೆ–ಮಾವ ಮತ್ತು ಉಳಿದ ಸಂಬಂಧಿಕರನ್ನು ಯೋಗ್ಯ ರೀತಿಯಲ್ಲಿ ಆಧರಿಸಿ ಸತ್ಕರಿಸಬೇಕು ಎಂದು ಹೇಳಿದ್ದರು.

ಹಿಂದೂ ಧರ್ಮಶಾಸ್ತ್ರವು ಸ್ತ್ರೀಯು ಸ್ವಾಂತಂತ್ರ್ಯಕ್ಕೆ ಯೋಗ್ಯಳಲ್ಲವೆಂದು ಸ್ಪಷ್ಟವಾಗಿ ಹೇಳಿದೆ. ವಿನಯ ಪೀಠಕದ ಪ್ರಕಾರ ಹಿಂದೂ ಸಮಾಜದಲ್ಲಿ ಚಾಲ್ತಿಯಲ್ಲಿದ್ದ ಸ್ತ್ರೀಯರ 10 ಪ್ರಕಾರಗಳೆಂದರೆ ಅವು ಈ ರೀತಿಯಲ್ಲಿವೆ

1) ಖರೀದಿಸಿ ತಂದಂತಹ ಸ್ತ್ರೀ.

2) ವಿವಾಹಿತ ಸ್ತ್ರೀ,

3) ಭೋಗವಾಸಿನಿ

4) ಪಟದಾತ್ರಿ

5) ಜಲದಾತ್ರಿ

6) ಭಾರವಾಹಿ

7) ದಾಸಿ

8) ಪತ್ನಿ

9) ಕಲಾಕುಸುರಿ ಮಾಡುವವಳು

10) ಧ್ವಜಹತಾ.

ಹೀಗೆ ಗುರುತಿಸಿ ಕರೆಯುತ್ತಿದ್ದರು. ಇದರಿಂದ ನಮಗೆ ತಿಳಿದುಬರುವುದು ಆ ಕಾಲದಲ್ಲಿ ಮಹಿಳೆಯರಿಗೆ ಹಿಂದೂ ಸಮಾಜದಲ್ಲಿ ಸ್ವತಂತ್ರ, ಸಮಾನತೆ, ಘನತೆ, ಗೌರವವಿರಲಿಲ್ಲ ಎಂದು ತಿಳಿದುಬರುವುದರ ಜೊತೆಗೆ ಇಲ್ಲಿ ಮಹಿಳೆಯು ವಸ್ತುಗಳ ರೀತಿಯಲ್ಲಿ ವ್ಯಾಪಾರವಾಗುವುದರ ಜೊತೆಗೆ ಪ್ರಾಣಿಗಳಿಗಿಂತ ಕೆಟ್ಟ ಸ್ಥಿತಿಯಲ್ಲಿ ಬದುಕುತ್ತಿದ್ದಳು ಎಂಬುದು ತಿಳಿದು ಬರುತ್ತದೆ.

ಆದರೆ ಇದಕ್ಕೆ ತದವಿರುದ್ಧವಾಗಿ ಬುದ್ಧರ ಕಾಲದಲ್ಲಿ ಸ್ತ್ರೀಯರಿಗೆ ಸಮಾಜದಲ್ಲಿ ಸಮಾನವಾದ ಸ್ಥಾನಮಾನವನ್ನು ಕೊಟ್ಟರೂ. ಮನುಸ್ಮೃತಿಯ ಅನುಸಾರವಾಗಿ ಸ್ತ್ರೀಯು ತನ್ನ ಪತಿಯನ್ನು ದೇವರೆಂದು ಭಾವಿಸಿ ಪೂಜಿಸಬೇಕು. ಎಂದು ಹೇಳುತ್ತದೆ. ಆದರೆ ಬುದ್ಧರ ಕಾಲದಲ್ಲಿ ಈ ರೀತಿಯಾದ ಉಲ್ಲೇಖಗಳು ಎಲ್ಲಿಯೂ ಕಂಡುಬರುವುದಿಲ್ಲ. ಹಾಗೆ ಬುದ್ಧರು ಪತ್ನಿಯು ಸರ್ವೋತ್ತಮ ಸಹಚಾರಣಿ ಎಂದಿದ್ದಾರೆ.

ಇವರ ಕಾಲದಲ್ಲಿ ಮಹಿಳೆಯು ತಾನು ಸಂಪಾದಿಸಿದ ಸಂಪತ್ತಿನ ಮೇಲೆ ಸಂಪೂರ್ಣವಾಗಿ ಅಧಿಕಾರವನ್ನು ಹೊಂದಿದ್ದಳು. ಸಂಪತ್ತಿನ ನಿಶ್ಚಿತವಾದ ಕಾಯ್ದೆ, ಕಾನೂನುಗಳು ಬುದ್ಧರ ಕಾಲದಲ್ಲಿರಲಿಲ್ಲ.

ಉದಾ: "ಭದ್ರ ಕಪಿನಾ" ಎಂಬ ವಿವಾಹಿತ ಮಹಿಳೆಯು ತಾನು ಸಂಘ ಸೇರಬೇಕು ಎಂಬ ಆಸೆಯಿಂದ ತನ್ನ ಸಂಪತ್ತನ್ನು ಸಂಪೂರ್ಣವಾಗಿ ಅವಳ ಸಂಬಂಧಿಕರಲ್ಲಿ ಹಂಚಿದಳು. ಹೀಗೆ ಬುದ್ಧರ ಕಾಲದಲ್ಲಿ ಮಹಿಳೆಯರಿಗೆ ಮದುವೆ ಸಮಯದಲ್ಲಿ ದೊರೆತಂತಹ ಸಂಪತ್ತಿನ ಮೇಲಷ್ಟೆ ಅಲ್ಲದೆ ತನ್ನ ಪತಿಯ ಮನೆಯಿಂದ ದೊರೆಯುವ ಸಂಪತ್ತಿನ ಮೇಲೂ ಅಧಿಕಾರವಿತ್ತು. ಬುದ್ಧರ ಕಾಲದಲ್ಲಿ ಪುನರ್ ವಿವಾಹದ ಉದಾಹರಣೆ ಕೂಡ ಕಂಡುಬರುತ್ತವೆ. ಉದಾ: ಇಸಿದಾಸಿಯು ಎರಡನೆಯ ಮದುವೆಯಾದ ಉಲ್ಲೇಖವಿದೆ. ಸ್ತ್ರೀಯರ ಪುನರ್ವಿವಾಹದ ವರ್ತನೆಯನ್ನು ಯಾರೂ ಖಂಡಿಸುತ್ತಿರಲಿಲ್ಲ. ಬುದ್ಧರ ಧಮ್ಮ ಇದಕ್ಕೆ ಅನುಕಂಪ, ಮತ್ತು ಕಾನೂನು ಮಾಡಿತು.

ಕೃಷ್ಟ ಎಂಬ ಕನ್ಯೆಯ ಕಥೆಯನ್ನು ಧಮ್ಮ ಪದದ 82ನೇ ಗಾಥೆಯಲ್ಲಿ ಉಲ್ಲೇಖಿಸಲಾಗಿದೆ. ಅಂದರೆ ಕೃಷ್ಣಯು ಮದುವೆಯಾಗಿದ್ದು ಅವಳ ಪತಿಯು ಬೇರೆ ಮದುವೆಯನ್ನು ಮಾಡಿಕೊಂಡಾಗ ಆ ಊರಿನ ರಾಜ ಅವಳನ್ನು ದತ್ತು ತೆಗೆದುಕೊಂಡು ನಂತರ ಅವಳ ವಿವಾಹವನ್ನು ಬೇರೆಡೆ ನೆರವೇರಿಸಿದನು. ಬುದ್ಧರ ಕಾಲದಲ್ಲಿ ಸತಿ ಪದ್ಧತಿ ಇರಲಿಲ್ಲ. ಅವಳನ್ನು ಹೀನಾಯವಾಗಿ, ಅಶುಭ ಎಂದು ಕಾಣುವುದಾಗಲಿ ಇರಲಿಲ್ಲ. ಪತಿಯು ಜೀವತ ಕಾಲದಲ್ಲಿ ಸಮಾಜದಲ್ಲಿ ದೊರೆತ ಸಾಮಾಜಿಕ ಸ್ಥಾನಮಾನವನ್ನು ಪತಿಯ ಮರಣದ ನಂತರವೂ ಅಷ್ಟೆ ದರ್ಜೆಯಲ್ಲಿ ಹೊಂದುತ್ತಿದ್ದಳು. ಬುದ್ಧರ ಕಾಲದಲ್ಲಿ ಕೇಶ ಮುಂಡನೆ, ಆಭರಣಗಳ ತ್ಯಾಗಮಾಡುವ ಪದ್ಧತಿ ಇರಲಿಲ್ಲ. ಸಭೆ–ಸಮಾರಂಭಗಳು ಹಾಗೂ ಕಾರ್ಯಕ್ರಮಗಳಲ್ಲಿ ವಿಧವೆಯರೂ ಇತರ ಸ್ತ್ರೀಯರಂತೆ ಭಾಗವಹಿಸುತ್ತಿದ್ದರು. ಪತಿಯು ಸತ್ತ ನಂತರ ಪತ್ನಿಯ ಪಾಲನೆ–ಪೋಷಣೆಯನ್ನು ತಂದೆ, ತಾಯಿ, ಅಣ್ಣ, ಬಂಧುಗಳು ವಹಿಸಿಕೊಳ್ಳುತ್ತಿದ್ದರು.

**ಬುದ್ಧನ ಸಂಘದಲ್ಲಿ ಮಹಿಳೆಯರು:**

ಬುದ್ಧರ ಕಾಲದಲ್ಲಿ ಒಂದು ವೇಳೆ ಪತಿಯು ಮರಣ ಹೊಂದಿದರೆ ಪತ್ನಿಯು ಹರೆಯದ ವಿಧವೆಯಾಗಿದ್ದರೆ ಅವಳಿಗೆ ಮರುಮದುವೆಯಾಗುವ ಸ್ವಾತಂತ್ರ್ಯವನ್ನು ಕೊಡಲಾಯಿತು. ಈ ಪದ್ಧತಿ ಬುದ್ಧರ ಕಾಲದಲ್ಲಿ ಜಾರಿಯಲ್ಲಿತ್ತು. ಆದರೆ ಆ ಕಾಲದ ಬಹುತೇಕ ವಿದವೆಯರು ಬೌದ್ಧ ಭಿಕ್ಷುಣಿಯಾದ ಬಗ್ಗೆ ಉಲ್ಲೇಖವಿದೆ. ಏಕೆಂದರೆ ಬೌದ್ಧ ಸಂಘ ಸೇರುವುದರಿಂದ ಅವರಿಗೆ ಜೀವನ ಮುಕ್ತಿ ದೊರೆಯುವುದರ ಜೊತೆಗೆ ಸಮಾಜದಲ್ಲಿ ಇನ್ನೂ ಹೆಚ್ಚಿನ ಸ್ಥಾನಸಿಗುತ್ತಿತ್ತು. ಅನೇಕ ವಿದವೆಯರು ಪುನರ್‌ವಿವಾಹವಾಗದೆ ಸಂಘ ಸೇರಿದ್ದರು. ಬಡವಿದವೆಯರು ಅಷ್ಟೇ ಅಲ್ಲದೆ ಶ್ರೀಮಂತ ಮಹಿಳೆಯರು, ರಾಣಿಯರು, ಮಹಾರಾಣಿಯರು ಸಹ ಸಂಘ ಸೇರುತ್ತಿದ್ದರು.

ಬಡ ವಿದವೆಯರು ತಮ್ಮ ಮಕ್ಕಳ ಮತ್ತು ಬದುಕನ್ನು ಸಾಗಿಸುವುದಕ್ಕಾಗಿ ವ್ಯಾಪಾರ ಮತ್ತು ಉದ್ಯೋಗಗಳಲ್ಲಿ ತೊಡಗುತ್ತಿದ್ದರು. ಮತ್ತೆ ಮಹಿಳೆಯರು ಗರುಡಿಗರಂತೆ ಶಾರೀರಕ ಕಸರತ್ತುಗಳನ್ನು ತೋರಿಸುವವರಿದ್ದರೆಂಬ ಒಂದೇ ಒಂದು ಉಲ್ಲೇಖವಿದೆ. ಇವರು ವರ್ಷದಲ್ಲಿ ಒಂದೆರಡು ಸಲ ರಾಜದರ್ಬಾರಿಗೆ ಹೋಗಿ ಅಲ್ಲಿ ಏಳು ದಿನಗಳವರೆಗೆ ತಮ್ಮ ಕಸರತ್ತುಗಳನ್ನು ತೋರಿಸುತ್ತಿದ್ದರು. ಎಂಬುವುದು ತಳಿದುಬಂದಿದೆ. ದಾಸಿಯರು ತಮ್ಮ ಸಾಮರ್ಥ್ಯಕ್ಕಿಂತ ಹೆಚ್ಚು ಕೆಲಸ ಮಾಡುತ್ತಿರಲಿಲ್ಲ. ಇದಕ್ಕೆ ಅವರ ಒಡೆಯ, ಒಡತಿ ಕೂಡ ಒಪ್ಪಿ ಅನುಮತಿ ನೀಡುತ್ತಿರಲಿಲ್ಲ. ದಾಸಿಯರು ಬೌದ್ಧ ಸಂಘದಲ್ಲಿ ಸೇರಬಯಸಿದರೆ ಅವಳನ್ನು ಮುಕ್ತಳನ್ನಾಗಿ ಮಾಡಲಾಗುತ್ತಿತ್ತು.

**ರಾಜನರ್ತಕಿಯರು ಮತ್ತು ಬುದ್ಧ:**

ರಾಜನರ್ತಕಿಯರ ಕಸುಬು ಬುದ್ಧನಿಗಿಂತಲೂ ಪೂರ್ವದ ಸಮಾಜದಲ್ಲಿ ರೂಢಿಯಲ್ಲಿತ್ತು. ವಿವಾಹವಾಗದ ಸ್ತ್ರೀಯರು ನೃತ್ಯ ಮತ್ತು ಗಾಯನದಲ್ಲಿ ತೊಡಗುತ್ತಿದ್ದರು. ಮನುವಿನ ಪ್ರಕಾರ ರಾಜ ನರ್ತಕಿಯರು ಅಶುದ್ಧರು, ಅವರ ಕೈಯಿಂದ ಬ್ರಾಹ್ಮಣರು ಅನ್ನವನ್ನು ಸೇವಿಸಬಾರದು. ರಾಜನು ಅವರ ಅವಶ್ಯತಕತೆಯ ನಂತರ ಅವರಿಗೆ ಕಠೋರ ಶಿಕ್ಷೆ ಕೊಡಬೇಕು. ಎಂದಿದ್ದಾನೆ. ಆದರೆ ಬುದ್ಧರ ಕಾಲದಲ್ಲಿ ಗಣಿಕೆಯರ ಸಂಖ್ಯೆ ಅತಿ ಕಡಿಮೆ ಇತ್ತು. ವಿಮಲಾ ಮತ್ತು ಸಿರಿಯಾ ಇವರು ಗಣಿಕೆಯರ ಮಕ್ಕಳು. ನಂತರ ವೇಶ್ಯೆಯರಾದರು. ಇವರನ್ನು ಒಳಗೊಂಡಂತೆ ಬುದ್ಧರು ವಿಮಲಾ ಅಭಯಮಾತಂ, ಪದ್ಮಾವತಿ, ಅಮ್ರಪಾಲಿ, ಅರ್ಥಕಾಶಿ ಇನ್ನೂ ಮುಂತಾದವರನ್ನು ಸಂಘಕ್ಕೆ ಸೇರಿಸಿಕೊಂಡು ಅವರಿಗೆ ಧಮ್ಮ ಉಪದೇಶವನ್ನು ನೀಡಿದ್ದರು.

ಈ ಒಂದು ಉದಾಹರಣೆಯಿಂದ ನಮಗೆ ತಿಳಿಯುವುದೆನೆಂದರೆ ಬುದ್ಧರು ರಾಜನರ್ತಕಿಯರಿಗೆ ಹಾಗೂ ಗಣಿಕೆಯರಿಗೆ ಕೊಟ್ಟಂತಹ ಸ್ಥಾನಮಾನದ ವಿಷಯವು ಕ್ರಾಂತಿಕಾರಕವಾಗಿದೆ. ತೇರಿಗಾಥಾಧಲ್ಲಿ ನಿರ್ವಾಣ ಪಡೆದ ಸ್ತ್ರೀಯರ ಸಂಖ್ಯೆ 32 ಹಾಗೂ ವಿವಾಹಿತ ಸ್ತ್ರೀಯರ ಸಂಖ್ಯೆ 10 ಇತ್ತೆಂದು ಉಲ್ಲೇಖಿಸಲಾಗಿದೆ. ಶುಭಾ, ಅನುಪಮಾ, ಸುಮೇಧಾ ಇವರುಗಳು ಶ್ರೀಮಂತೆ ಮತ್ತು ರಾಜಮನೆತನದ ಮಹಿಳೆಯರಾಗಿದ್ದರು.

ಸ್ತ್ರೀಯರಲ್ಲಿ ಸ್ವಾತಂತ್ರ್ಯದ ಭಾವನೆಯು ಜಾಗೃತವಾಗುತ್ತಿದ್ದಂತೆಯೇ ಸ್ತ್ರೀಯರಲ್ಲಿ ಎರಡು ವರ್ಗಗಳಾದವು ಒಂದು ಉಪಸಿತಾ (ಉಪಸಕ/ಉಪಸಕಿ) ಮತ್ತೊಂದು ಭಿಕ್ಷುಣಿ.

ಉಪಸಿಕಾ : ಸಂಸ್ಕಾರದಲ್ಲಿದ್ದುಕೊಂಡು ಧಮ್ಮಕಾರ್ಯ ಮಾಡುತ್ತಿದ್ದವರು. ಇವರಿಗೆ ಗೃಹಿಣಿ ಅಥವಾ ಉಪಸಿಕಾ ಎಂದು ಕರೆಯುತಿದ್ದರು.

ಭಿಕ್ಷುಣಿ: ಸಂಸಾರದಿಂದ ಅಲಿಪ್ತರಾಗಿ ಪೀತವಸ್ತ್ರ ಧರಿಸಿದವರು.

**ಬ್ರಹ್ಮಚರ್ಯೆಯ ಭಿಕ್ಷುಣಿಯರು ಮತ್ತು ಬುದ್ಧ :**

ಬುದ್ಧನ ಉಪದೇಶಗಳಲ್ಲಿ ಸ್ವಾವಲಂಬನೆಗೆ ಹೆಚ್ಚಿನ ಮಹತ್ವ ಕೊಡಲಾಯಿತು. ಈ ಧಮ್ಮದಲ್ಲಿ ಸಹಭಾಗಿತ್ವ ಮೊದಲಿನಿಂದಲೂ ದೊಡ್ಡ ಪ್ರಮಾಣದಲ್ಲಿತ್ತು. ಈ ಧಮ್ಮಕ್ಕೆ ಹೊಸ ರೂಪ ಕೊಡವಲ್ಲಿ ಸ್ತ್ರೀಯರ ಶ್ರಮ ಹೆಚ್ಚಿಗೆ ಇದೆ. ಮೊದಲ ಬಾರಿಗೆ ಭಿಕ್ಷುಣಿಯರಾಗಲು ಭಾರತೀಯ ಸ್ತ್ರೀಯರು ಬಹು ಸಂಖ್ಯೆಯಲ್ಲಿ ಸಂಘಟಿತರಾಗಿದ್ದರು. ಸ್ವಚ್ಛಮಯವಾದ ಕಠೋರ ನಿಯಮವನ್ನು ಪಾಲಿಸಲು ಸಿದ್ಧರಿದರು. ಈ ಬ್ರಹ್ಮಾಚರ್ಯೆಯ ಪಾಲನೆ ಮೊದಲು ಪುರುಷರಿಗೆ ಮಾತ್ರ ಸೀಮಿತಿವಾಗಿತ್ತು. ಭಗವನ್ ಬುದ್ಧರ ಉಪದೇಶವು ಕೇವಲ ಪುರುಷರಿಗೆ ಮಾತ್ರವಲ್ಲದೆ ಸ್ತ್ರೀಯರಿಗೆ, ಮಕ್ಕಳಿಗೆ, ವೃದ್ಧರಿಗೂ ಅನ್ವಯವಾಗುತ್ತಿತ್ತು. ಸಂಸಾರ, ಜನನ ಮತ್ತು ಮರಣದಿಂದ ಪಾರಾಗಲು ಸ್ತ್ರೀಯರು ದುಃಖ ಮುಕ್ತಿ ಮಾರ್ಗಹೊಂದಲು ಭಿಕ್ಷುಣಿಯರ ಸಂಘಸ್ಥಾಪಿತವಾಗಿತ್ತು. ಬುದ್ಧರು ಭಿಕ್ಷು ಸಂಘ ಸ್ಥಾಪಿಸಿ ಎಲ್ಲಾ ಸನ್ಯಾಸಿಗಳನ್ನು ಒಂದು ಕಡೆ ಒಗ್ಗೂಡಿಸಿ ಅವರನ್ನು ಸಮಾಜ ಕಾರ್ಯಕ್ಕಾಗಿ ಪ್ರೇರೇಪಿಸಿದರು.

ಭಿಕ್ಷುಣಿಯರು ಧಮ್ಮ ಪ್ರಸಾರ ಚಳುವಳಿಯಲ್ಲಿ ಧುಮುಕಿ ಧಮ್ಮ ಪ್ರಚಾರ ಮತ್ತು ಪರಿಪಾಲನೆ ಮಾಡಲು ಧಮ್ಮ ಸೇವೆಯನ್ನು ಕೈಗೊಳ್ಳಲು ಭಿಕ್ಷುಗಳಿಗಿಂತ ಕಡಿಮೆ ಇಲ್ಲವೆಂದು ಸಾಧಿಸಿ ತೋರಿಸಿದರು. ಅದರಲ್ಲಿ ಸಂಕೇತ, ಧನಿಕ, ಮಾದಾನಕ್ಕೈ, ಅನುಪಮಾ, ವಿಶಾಖಾ, ಮಲ್ಲಿಕಾದೇವಿ, ಸೋನದಿನ್ನಾ, ನಂದಾ, ಸಾಮವತಿ, ಲೀಲಾವತಿ, ರೂಪನಂದಾ, ರೇವತಿ ಇನ್ನೂ ಅನೇಕ ಮಹಿಳೆಯರು ಕಠಿಣವಾದ ಬ್ರಹ್ಮಚಾರ್ಯಪಾಲನೆ ಮಾಡಿ ಬೌದ್ಧ ಧಮ್ಮವನ್ನು ದೇಶದಾದ್ಯಂತ ಹರಡಿದರು.

**ಸಮಾರೋಪ :** ಒಟ್ಟಾರೆಯಾಗಿ ಹೇಳುವುದಾದರೆ ಬಹುಶಃ ಜಗತ್ತಿಗೆ ಸರ್ವೋದಯ ಕ್ರಾಂತಿಯ ಹಾಗೂ ಸಮಾನತೆಯ ಪ್ರಪ್ರಥಮ ಹರಿಕಾರನಾದ ಬುದ್ಧ ಕೇವಲ ಇಂದಿಗೆ ಮಾತ್ರವಲ್ಲ ಎಲ್ಲ ಕಾಲಕ್ಕೂ ಪ್ರಸ್ತುತವೆನಿಸಿದ್ದಾರೆ. ಮನವ ಕುಲದ ಉದ್ಧಾರಕ್ಕಾಗಿ ಅವರು ಬೌದ್ಧ ಧಮ್ಮವನ್ನು ಬೋಧಿಸಿದ. ಆತ ತೋರಿದ ಅತಿರೇಕಗಳಿಂದ ಹೊರತಾದ ಸುವರ್ಣಮಾಧ್ಯಮ ಧಮ್ಮ ಮಾರ್ಗದಲ್ಲಿ ನಡೆದರೆ ಹಾಗೂ ಶೀಲ, ಸಮಾಧಿ, ಪ್ರಜ್ಞೆಯಿಂದ ಕೂಡಿದ ಅಷ್ಟಾಂಗ ಮಾರ್ಗವನ್ನು ಅನುಸರಿಸಿದ್ದರೆ ಮಾನವರು ಸಕಲ ಕ್ಲೇಶಗಳಿಂದ ಮುಕ್ತರಾಗಿ ನಿಬ್ಬಾಣವನ್ನು ಸಾಧಿಸಬಹುದೆಂಬ ದಾರಿ ತೋರಿಸಿಕೊಟ್ಟಿದ್ದಾರೆ. ಎರಡು ಸಾವಿರದ ಐನೂರು ವರ್ಷಗಳ ಹಿಂದೆ ಬುದ್ಧರ ಕಾಲದಲ್ಲಿ ಗ್ರೀಸ್, ಚೀನಾ, ದೇಶದಲ್ಲಿನ ಸ್ತ್ರೀಯರಿಗೆ ಹೋಲಿಸಿದರೆ ಭಾರತದ ಸ್ತ್ರೀಯರ ಸ್ಥಾನಮಾನ ತುಂಬ ಉನ್ನತಮಟ್ಟದಲ್ಲಿ ಇದ್ದು ಅಂದರೆ ಮಹಿಳೆಯರ ಸಬಲೀಕರಣ ಬುದ್ಧ ಭಾರತೀಯ ತತ್ವಜ್ಞಾನಕ್ಕೆ ನೀಡಿದ ಕೊಡುಗೆಯಲ್ಲೇ ಮಹತ್ವವಾದದು. ಅವರ ಜಾತಿ

ನಿರ್ಮೂಲನೆ, ಸಮಾನತೆ, ಹಾಗೂ ಸ್ತ್ರೀವಿಮೋಚನೆ ಇವು ಭಾರತೀಯ ದೇಶಕ್ಕೆ ನೀಡಿದ ಉತ್ತಮ ಮಾನವೀಯ ಕೊಡುಗೆಯಾಗಿವೆ.

ಬುದ್ಧರು ತನ್ನ ಸ್ತ್ರೀಪರವಾದ ನಿಲುವಿನಿಂದಾಗಿ ತನ್ನ ಸಾಕು ತಾಯಿಯಾದ ಪ್ರಜಾಪತಿ ಗೌತಮಿಗೆ ಭಿಕ್ಕುಣಿ ಸಂಘದ ನೇತೃತ್ವವನ್ನು ವಹಿಸಿದ್ದರು. ಅದೇ ರೀತಿ ಪತ್ನಿ ಯಶೋಧರೆಗೂ, ಅವಳ ಜೊತೆಯಲ್ಲಿ ಬಂದಿದ್ದ ನೂರಾರು ಮಾತೆಯರಿಗೂ ಧಮ್ಮ ದೀಕ್ಷೆಯನ್ನು ನೀಡಿ ಸಂಘದಲ್ಲಿ ನೆಲೆಸಲು ಅವಕಾಶ ನೀಡಿದ. ಇಷ್ಟೆ ಅಲ್ಲದೆ ಉತ್ತಮವಾದ ಕಾರ್ಯಗಳಿಂದಾಗಿ ಅಂದಿನ ಧಾರ್ಮಿಕ ವ್ಯವಸ್ಥೆಯಲ್ಲಿ ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿದ ಕ್ರಾಂತಿಕಾರರು ಬುದ್ಧ ಎಂದು ಹೇಳಬಹುದಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಇಂದು ಭಾರತೀಯ ಸಮಾಜದಲ್ಲಿ ಮಹಿಳೆಯರಿಗೆ ತಾಯಿಯಾಗಿ, ತಂಗಿಯಾಗಿ, ಅಕ್ಕನಾಗಿ, ಹೆಂಡತಿಯಾಗಿ, ಮಗಳಾಗಿ, ಸೊಸೆಯಾಗಿ ಉತ್ತಮವಾದ ಸ್ಥಾನಮಾನಲಭಿಸಿವೆ ಅಂದರೆ ಹಾಗೂ ಎಷ್ಟೋ ಕುಟುಂಬಗಳು ನಿರ್ವಹಣೆ ಹಾಗೂ ಜವಾಬ್ದಾರಿಯನ್ನು ಮಹಿಳೆಯರಿಗೆ ವಹಿಸಿದೆ ಅಂದರೆ ಅದಕ್ಕೆ ಮೂಲ ಬೇರು ಬುದ್ಧರ ಕಾಲದ ನಡೆದ ಕ್ರಾಂತಿಕಾರಕ ಹೋರಾಟಗಳು ಎಂದು ಸಹ ಹೇಳಬಹುದಾಗಿದೆ. ಅಷ್ಟೇ ಅಲ್ಲದೆ ಬಸವಣ್ಣನವರ ಚಳುವಳಿಯ ಕ್ರಾಂತಿಯ ಬೇರು ಕೂಡ ಭೌದ್ಧ ದಮ್ಮದಿಂದಲ್ಲೇ ಬಂದಿದೆ ಎಂದು ಹೇಳಬವುದಾಗಿದೆ. ಮುಂದುವರೆದು ಹೇಳಬೇಕು ಅಂದರೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮಹಿಳಾ ಸಬಲೀಕರಣದ ಪ್ರೇರಣಶಕ್ತಿ ಬುದ್ಧ ಮತ್ತು ಬೌದ್ಧಧಮ್ಮ ಎಂದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು:**


1) ಬುದ್ಧರ ಜಾತಕ ಕಥೆಗಳು–ಪ್ರೊ.ಬಿ.ನಂ.ಚಂದ್ರಯ್ಯ – ಸಮಗ್ರ ಸಂಪುಟ–03, ಪ್ರಕಾಶಕರು ವಿಶ್ವಮೈತ್ರಿ ಸಂಶೋಧನಾ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ, ಸರಸ್ವತಿಪುರಂ, ಮೈಸೂರು–2004.
2) ಮರಳಿ ಮನೆಗೆ–ಡಾ.ಮೂಡ್ನಾ ಕೂಡು ಚಿನ್ನಸ್ವಾಮಿ.ಪ್ರಧಾನ ಸಂಪಾದಕರು ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನ ಮತ್ತು ವಿಸ್ತರಣ ಕೇಂದ್ರ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು–2006.
3) Buddhism and Modern Society– Y.Sudershan Rao, G. Bhadru Naik. Deep and Deep Publications Pvt. Ltd. Rajouri Garden, New Delhi – 110027–2008.
4) ಬುದ್ಧ ಇಪ್ಪತ್ತೈದು ಸಂಪುಟಗಳ ಬುದ್ಧ ಸಾಹಿತ್ಯ–ಸಿ.ಎಚ್.ರಾಜಶೇಖರ್, ಸೌಮ್ಯಶ್ರೀ ಪುಸ್ತಕ ಪ್ರಕಾಶನ–2010.
5) ಸಮಾಜ ಬದಲಾವಣೆಯಲ್ಲಿ ಮಹಿಳೆಯರ ಪಾತ್ರ–ಕೆ.ಶಾಂತಕುಮಾರಿ ಪತ್ರಕರ್ತೆ, ಪ್ರಕಾಶಕರು ಮತ್ತು ಮುದ್ರಕರು ಲೀಗಲ್ ಟೈಮ್ಸ್ ಪಬ್ಲಿಕೇಷನ್, ಯಶವಂತಪುರ ಸರ್ಕಲ್ ಕ್ರಾಸ್ ಬೆಂಗಳೂರು–2018.
6) ಬುದ್ಧಮಾರ್ಗ– ಡಾ.ಸಿ ಚಂದ್ರಪ್ಪ ಮುಖ್ಯಸ್ಥರು ಮತ್ತು ಸಹಪ್ರಾಧ್ಯಾಪಕರು,ಇತಿಹಾಸ ವಿಭಾಗ ಬೆಂಗಳೂರು,ಸಪ್ನ ಬುಕ್ ಹೌಸ್ ಗಾಂಧಿನಗರ,ಬೆಂಗಳೂರು–560009,ಪ್ರಥಮ ಮುದ್ರಣ–2019.
7) ಬುದ್ದನ ದಾರಿಯ ಕಡೆಗೆ ಬಾಬಾ ಸಾಹೇಬರು ತಿರುಗಿದ್ದೇಕೆ. . .? ಡಾ.ವೆಂಕಟೇಶಯ್ಯ ನೆಲ್ಲುಕುಂಟೆ ಸಂವಾದ ಮಾಸ ಪತ್ರಿಕೆ ಸಂಪುಟ–22, ಸಂಚಿಕೆ–12 ಅಕ್ಟೋಬರ್
8) Buddhism- Sameer Das cyber tech Publication New Delhi frist Edition–2010
9) ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ ತಾಪಿ ಧರ್ಮಾರಾವ್ ನವಕರ್ನಾಟಕ ಪ್ರಕಾಶನ ಮೊದಲ ಮುದ್ರಣ–1960
10) ಅಂಬೇಡ್ಕರ್ ಮತ್ತು ಸಾಮಾಜಿಕನ್ಯಾಯ–ಡಾ.ಮ.ನ.ಜವರಯ್ಯ ಪ್ರಕಾಶಕರು ಸಿದ್ಧಾರ್ಥ ಗ್ರಂಥಮಾಲೆ ಮೊದಲ ಮುದ್ರಣ–1995